### ಕಾಸರಗೋಡು ಸಿಪಿಸಿಆರ್‌ಐನಲ್ಲಿ ಅಡಿಕೆ ಮತ್ತು ಮಾನವ ಆರೋಗ್ಯ ಕಾರ್ಯಾಗಾರ

# ಅಡಿಕೆ ಆರೋಗ್ಯಕ್ಕೆ ಹಾನಿಕರವಲ್ಲ: ತಜ್ಞರ ಅಭಿಪ್ರಾಯ

ದಿಗಂತ ವರದಿ: ಕಾಸರಗೋಡು, ಜು.25

ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆ(ಸಿಪಿಸಿಆರ್‌ಐ) ಕಾಸರಗೋಡು ಇದರ ನೇತೃತ್ವದಲ್ಲಿ ಎರಡು ದಿನಗಳ 'ಅಡಿಕೆ ಮತ್ತು ಮಾನವ ಆರೋಗ್ಯ' ಕಾರ್ಯಾಗಾರದ ಮೊದಲ ದಿನ ಮಂಗಳವಾರ ವಿವಿಧ ಕಾರ್ಯಕ್ರಮ ನಡೆಯಿತು. ಅಡಿಕೆ ಕ್ಯಾನ್ಸರ್‌ಕಾರಕ ಅಲ್ಲ ಎಂಬುದನ್ನು ಕಾರ್ಯಾಗಾರದಲ್ಲಿ ಪಾಲ್ಗೊಂಡ ತಜ್ಞರು ಒತ್ತಿ ಹೇಳಿದರು.

ಕಾರ್ಯಾಗಾರದ ಸಮಾರೋಪದಲ್ಲಿ ಮಾತನಾಡಿದ ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ ಹಾಗೂ ಭಾರತದ ಮಾಜಿ ಅಡಿಶನಲ್ ಸಾಲಿಸಿಟರ್ ಜನರಲ್ ಆಗಿದ್ದ ಕೆ.ಎನ್.ಭಟ್ ಮಾತನಾಡಿ, ಅಡಿಕೆ ಕ್ಯಾನ್ಸರ್‌ಕಾರಕ ಅಲ್ಲ ಎಂಬುದು ಇಲ್ಲಿ ನಡೆದ ತಜ್ಞರ ಮಂಥನದಿಂದ ಸ್ಪಷ್ಟಗೊಂಡಿದೆ.ಆದಾಗ್ಯೂ ಅಡಿಕೆಯ ಪ್ರಯೋಜನವನ್ನು ಎತ್ತಿ ಹಿಡಿಯುವ ಮತ್ತು ಅಡ್ಡಪರಿಣಾಮಗಳ ಬಗ್ಗೆ ಇನ್ನಷ್ಟು ಆಳವಾದ ಸಂಶೋಧನೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಆಳ ಅಧ್ಯಯನ ಮತ್ತು ಅಡಿಕೆಯ ಪರ್ಯಾಯ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ತುರ್ತು ಅಗತ್ಯವಿರುವುದನ್ನು ಒತ್ತಿ ಹೇಳಿದರು.

ಉದ್ಘಾಟನಾ ಭಾಷಣ ಮಾಡಿದ ಮಂಗಳೂರು ನಿಟ್ಟೆ ಉಪಕುಲಪತಿ ಡಾ.ಸತೀಶ್ ಕುಮಾರ್ ಭಂಡಾರಿ ಅವರು ಕ್ರಿ.ಪೂ.600ರಲ್ಲಿ ಸುಶ್ರುತ ಸಂಹಿತೆಯಲ್ಲಿ ಅಡಿಕೆ ಮತ್ತು ತಾಂಬೂಲವನ್ನು ಉಲ್ಲೇಖಿಸಲಾಗಿದೆ. ಆದರೆ ತಂಬಾಕು ಕಡಲೆಕಳೆ ಜೊತೆಗೆ 17ನೇ ಶತಮಾನದಲ್ಲಿ ಭಾರತಕ್ಕೆ ಬಂತು. ಅಣಬೆ ಸಂಗ್ರಹಣೆಯ ಸಮಯದಲ್ಲಿ ಬಳಸುವ ಶಿಲೀಂಧ್ರ ನಾಶಕಗಳು ಮತ್ತು ಕೀಟನಾಶಕಗಳು ಪಾನ್ ಮಸಾಲದಲ್ಲಿ ಹಾನಿಕಾರಕ ರಾಸಾಯನಿಕಗಳಾಗಿ ಪರಿವರ್ತನೆಗೊಳ್ಳುತ್ತದೆ. ನ್ಯೂಟ್ರಾಲಜಿ, ಮನೋ ವೈದ್ಯಶಾಸ್ತ್ರ ಮತ್ತು ನೇತ್ರ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಔಷಧಗಳಲ್ಲಿ ಅಡಿಕೆಯನ್ನು ಬಳಸಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ ಸಿಪಿಸಿಆರ್‌ಐ ನಿರ್ದೇಶಕ ಡಾ.ಪಿ.ಚೌಡಪ್ಪ ಅವರು ಮಾತನಾಡಿ, ಕಾರ್ಯಾಗಾರದ ಪ್ರಸ್ತುತತೆ ಮತ್ತು ಸಿಪಿಸಿಆರ್‌ಐ ಸಂಶೋಧನಾ ರಂಗದ ಪ್ರಗತಿಯ ಬಗ್ಗೆ ಮಾತನಾಡಿದರು. ಈ ಕಾರ್ಯಾಗಾರದ ಶಿಫಾರಸುಗಳು ಮತ್ತು ಕ್ರಿಯಾ ಅಂಶಗಳನ್ನು ಕ್ರೋಢೀಕರಿಸುವ ಅಗತ್ಯವಿದೆ ಎಂದರು.

ಇನ್ನೋರ್ವ ಮುಖ್ಯ ಅತಿಥಿ ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಮಂಜುನಾಥ ಕೆ.ನಾಯ್ಕ್ ಅವರು ಮಾತನಾಡಿ ಆರು ದಶಲಕ್ಷ ಜನರು ಅಡಿಕೆ ಕೃಷಿ ಮತ್ತು ಉದ್ಯಮದ ಮೇಲೆ ಅವಲಂಬಿತರಾಗಿದ್ದಾರೆ. ಕೃಷಿ ಆದಾಯದ ದ್ವಿಗುಣದಿಂದ ಅಡಿಕೆ ಕೃಷಿಕರಿಗೂ ಪ್ರಯೋಜನವಾಗಬೇಕು ಎಂದರು.

ಕಾರ್ಯಾಗಾರದಲ್ಲಿ ಖ್ಯಾತ ವೈದ್ಯರೂ, ಬೆಂಗಳೂರಿನ ಕಿದ್ವಾಯಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಯ ಮಾಜಿ ಪ್ರೊಫೆಸರ್ ಮತ್ತು ಮುಖ್ಯಸ್ಥರಾದ ಡಾ.ವಿಜಯಲಕ್ಷ್ಮೀ ದೇಶಮಾನೆ, ಮಣಿಪಾಲ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಸೈನ್ಸ್‌ನ ನಿರ್ದೇಶಕ ಡಾ.ಕೆ.ಸತ್ಯಮೂರ್ತಿ, ಪಶ್ಚಿಮಘಟ್ಟ ಕಾರ್ಯಪಡೆಯ ಮಾಜಿ ಅಧ್ಯಕ್ಷರಾದ ಅನಂತ ಹೆಗಡೆ ಅಶೀಸರ, ಕೋಜಿಕ್ಕೋಡಿನ ಅರೆಕನಟ್ ಅಂಡ್ ಸ್ಪೈಸಸ್ ಡೆವಲಪ್‌ಮೆಂಟ್ ನಿರ್ದೇಶನಾಲಯದ ಡಾ.ಹೋಮಿ ಚೆರಿಯನ್ ಮತ್ತಿತರ ತಜ್ಞರು ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದ ಸಂಚಾಲಕ ಡಾ.ಕೆ.ಬಿ.ಹೆಬ್ಬಾರ್ ಸ್ವಾಗತಿಸಿದರು. ಡಾ.ಎಸ್.ವಿ.ರಮೇಶ್ ವಂದಿಸಿದರು. ಕಾರ್ಯಾಗಾರದಲ್ಲಿ ವೈದ್ಯರು, ಕೃಷಿ ವಿಜ್ಞಾನಿಗಳು, ವ್ಯಾಪಾರಿಗಳು, ಪರಿಸರವಾದಿಗಳು, ಸಂಶೋಧಕರು, ಕೃಷಿಕರು ಸಹಿತ 200ಕ್ಕಿಂತಲೂ ಅಧಿಕ ಮಂದಿ ಭಾಗವಹಿಸಿದರು.




**ಆಳ ಅಧ್ಯಯನದ ಅಗತ್ಯವಿದೆ**

**ಅಡಿಕೆ ಕ್ಯಾನ್ಸರ್‌ಕಾರಕ ಅಲ್ಲ ಎಂಬುದು ಇಲ್ಲಿ ನಡೆದ ತಜ್ಞರ ಮಂಥನದಿಂದ ಸ್ಪಷ್ಟಗೊಂಡಿದೆ. ಆದಾಗ್ಯೂ ಅಡಿಕೆಯ ಪ್ರಯೋಜನವನ್ನು ಎತ್ತಿ ಹಿಡಿಯುವ ಮತ್ತು ಅಡ್ಡಪರಿಣಾಮಗಳ ಬಗ್ಗೆ ಇನ್ನಷ್ಟು ಆಳವಾದ ಸಂಶೋಧನೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಆಳ ಅಧ್ಯಯನ ಮತ್ತು ಅಡಿಕೆಯ ಪರ್ಯಾಯ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ತುರ್ತು ಅಗತ್ಯವಿದೆ.**

■ ಕೆ.ಎನ್.ಭಟ್, ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ